**<u>ಸಾಕ್ಷಿಗೆ ದಿನಾಂಕ 14.07.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 2ನೇ ಎದುರುದಾರರ ಪರ ಶ್ರೀ.RB ವಕೀಲರಿಂದಃ</u>**

1. ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತವಾದ ಮಾರನೇ ದಿನ ಬೆಳಗ್ಗೆ ನನಗೆ ಅಪಘಾತದ ಬಗ್ಗೆ ತಿಳಿದುಬಂದಿರುತ್ತದೆ. ನಾನು ಸ್ಟಾಫ್ ನರ್ಸ್ಆಗಿ ಆರ್.ಎಲ್ ಜಾಲಪ್ಪ ಆಸ್ಪತ್ರೆಯ ಪ್ರಸೂತಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಮ್ಮ ಆಸ್ಪತ್ರೆಯಲ್ಲಿ ಮೂಳೆರೋಗ ತಜ್ಞರ ವಿಭಾಗ ಇದೆ ಎಂದರೆ ಸರಿ. ಅಪಘಾತವಾದ ದಿನ ನಾನು ಬೆಳಗಿನ ಶಿಫ್ಟ್ ನಲ್ಲಿ ಇದ್ದೆನು. ಸದರಿ ಶಿಫ್ಟ್ ಬೆಳಗ್ಗೆ 8 ರಿಂದ 4 ಗಂಟೆಯದ್ದಾಗಿರುತ್ತದೆ. ನನ್ನ ಪತಿ ಅಪಘಾತದ ದಿನ ಕೂತಗಾನಹಳ್ಳಿಯಿಂದ ಪಂಡಿತ ಅಗ್ರಹಾರ ಕಡೆಗೆ ಹೋಗುತ್ತಿದ್ದರು. ನನ್ನ ಪತಿ ಮನೆಗೆ ವಾಪಸ್ಸಾಗುತ್ತಿದ್ದರು. ದೊಡ್ಡತಿಮ್ಮಸಂದ್ರದ ಬಳಿ ಟೈಜೂ ರವರ ಮನೆಯಲ್ಲಿ ಬಾಡಿಗೆಗೆ ಮತ್ತು ಕೆಲಸಕ್ಕಾಗಿ ಇದ್ದರು. ಟೈಜೂ ರವರು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ.

2. ಅಪಘಾತದ ವೇಳೆಯಲ್ಲಿ ನಾನು ನನ್ನ ಪತಿಯ ಜೊತೆ ಇರಲಿಲ್ಲ ಎಂದರೆ ಅವರು 15 ದಿನಕ್ಕೊಮ್ಮೆ ಮನೆಗೆ ಬರುತ್ತಿದ್ದರು. ನಾನು ವಾಸವಿರುವ ಮನೆಗೂ ಟೈಜೂ ರವರ ಮನೆಗೂ ಎಷ್ಟು ಅಂತರವಿರುತ್ತದೆ ಎಂದು ಗೊತ್ತಿಲ್ಲ. ನಾನು ವಾಸವಾಗಿರುವ ಮನೆ ಸ್ವಂತ ಮನೆಯಾಗಿರುತ್ತದೆ. ನಾನು ನನ್ನ ಪತಿಯನ್ನು ಅಪಘಾತದ ನಂತರ ನೋಡಿದಾಗ ಅವರು ಪ್ರಜ್ಞಾಹೀನಾಗಿದ್ದರು. ಅಪಘಾತದ ನಂತರ ನನ್ನ ಪತಿಯ ಪ್ರಥಮ ಚಿಕಿತ್ಸೆಯನ್ನು ಸರ್ಜಾಪುರ ಟೌನ್ ಸರ್ಕಾರಿ ಆಸ್ಪತ್ರೆಗೆ ಟೈಜೂ ರವರು ಕರೆದುಕೊಂಡು ಹೋಗಿರುತ್ತಾರೆ. ಅಪಘಾತದ ಬಗ್ಗೆ ಸ್ಥಳೀಯರು ಮತ್ತು ಟೈಜೂ ರವರು ಮಾಹಿತಿ ನೀಡಿರುತ್ತಾರೆ. ನನ್ನ ದೂ.9380572292 ಸಂಖ್ಯೆಗೆ ಕರೆ ಮಾಡಿ ತಿಳಿಸಿರುತ್ತಾರೆ. ಟೈಜೂ ರವರು

ನನಗೆ ದಿ.22.09.2023ರ ಮಧ್ಯಾಹ್ನ ಕರೆ ಮಾಡಿ ತಿಳಿಸಿರುತ್ತಾರೆ. ನಾನು ನನ್ನ ಪತಿಗೆ ದಿನಾಲು ಕರೆ ಮಾಡುತ್ತಿದ್ದೆನು. ನನ್ನ ಪತಿಯ ದೂರವಾಣಿ ಸಂಖ್ಯೆ ನನಗೆ ನೆನಪಿರುವುದಿಲ್ಲ. ಸಾಕ್ಷಿ ತಮ್ಮ ಮೊಬೈಲನ್ನು ನೋಡಿ ದೂ.7624866859 ಸಂಖ್ಯೆಯನ್ನು ಅಪಘಾತದ ವೇಳೆಯಲ್ಲಿ ಉಪಯೋಗಿಸುತ್ತಿದ್ದರು ಎಂದು ನುಡಿಯುತ್ತಾರೆ. ಟೈಜೂ ರವರ ದೂರವಾಣಿ ಸಂಖ್ಯೆ 9972372683 ಆಗಿರುತ್ತದೆ. ಅಪಘಾತವು ಮಧ್ಯಾಹ್ನ 2 ಗಂಟೆಗೆ ಸಂಭವಿಸಿರುತ್ತದೆ.

3. ಟೈಜೂ ಎನ್ನುವವರು ಸ್ಪಂದನ ಆಸ್ಪತ್ರೆಗೆ 22.09.2023 ರಂದು ದಾಖಲಿಸಿರುತ್ತಾರೆ. ಅವರು ಸದರಿ ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ಮಾಹಿತಿ ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಸ್ಪಂದನ ಆಸ್ಪತ್ರೆಯವರು ನೀಡಿದ **ಎಂ ಎಲ್ ಸಿ ದಾಖಲೆಯ ದೃಢೀಕೃತ ಪ್ರತಿಯನ್ನು ತೋರಿಸಿ (RTA/Head Injury/positioning)** ಎಂದು ನಮೂದಾಗಿರುವ ಬಗ್ಗೆ ಕೇಳಿದಾಗ ಅದನ್ನು ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ಸದರಿ ದಾಖಲೆಯನ್ನು **ನಿ.ಆರ್.1** ಎಂದು ನಿಶಾನಿಕರಿಸಲಾಯಿತು. ನಿ.ಪಿ.7- ದೂರನ್ನು ನಾನೇ ನೀಡಿರುತ್ತೇನೆ. ದೂರನ್ನು 13 ದಿನ ತಡವಾಗಿ ನೀಡಿರುತ್ತೇನೆ ಎಂದರೆ ಸರಿ. ಸ್ಪಂದನ ಆಸ್ಪತ್ರೆಯ ಡಿಸ್ಚಾರ್ಜ್ ಸಮರಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬಹುದಾ ಎಂದರೆ ಹಾಜರು ಪಡಿಸಬಹುದು.

**ಮುಂದುವರೆದ ಪಾಟೀಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**